# ವಿಶಿಷ್ಟ ವೀಕ್ಷಣಾನುಭವಕ್ಕೆ ಆಂಬಿಯೆಂಟ್ ಮೋಡ್

**ವಿಡಿಯೊ ವೀಕ್ಷಣೆಗೆ ಜಗತ್ತಿನಲ್ಲಿ ಅತಿಹೆಚ್ಚು ಜನ ಬಳಕೆ ಮಾಡುವ ಯೂಟ್ಯೂಬ್ ಅನ್ನು ಇನ್ನಷ್ಟು ಆಕರ್ಷಕವಾಗಿಸುವ ಸಲುವಾಗಿ ಆ್ಯಂಬಿಯೆಂಟ್ ಫೀಚರ್ ಕಲ್ಪಿಸಲಾಗಿದೆ.**

**■ ಶಶಿಕುಮಾರ್ ಸಿ.**

ಯಾವುದಾದರೂ ವಿಡಿಯೊ ಬೇಕೆಂದೊಡನೆ ನಮ್ಮ ನೋಟ ಹೊರಳುವುದು ಯೂಟ್ಯೂಬ್‌ನತ್ತ. ಜಗತ್ತನ್ನೇ ತನ್ನೊಳಗೆ ಅಡಗಿಸಿಕೊಂಡಂತಿರುವ ಯೂಟ್ಯೂಬ್ ತನ್ನ ಗ್ರಾಹಕರಿಗೆ ಇನ್ನಷ್ಟು ಆಕರ್ಷಕ ಅನುಭವ ಕಲ್ಪಿಸುವ ಸಲುವಾಗಿ ‘ಆಂಬಿಯೆಂಟ್’ ಹೆಸರಿನ ಫೀಚರ್ ಪರಿಚಯಿಸಿದೆ.

ಯೂಟ್ಯೂಬ್‌ನ ಈ ಆಂಬಿಯೆಂಟ್ ಮೋಡ್, ಬಳಕೆದಾರರಿಗೆ ವಿನೂತನ ಅನುಭವ ನೀಡಲಿದೆ. ಮೊಬೈಲ್‌ನಲ್ಲಿ ಲಭ್ಯವಿರುವ ಯೂಟ್ಯೂಬ್ ಆ್ಯಪ್‌ನಲ್ಲಿ ಅತ್ಯಾಕರ್ಷಕ ವೀಕ್ಷಣಾನುಭವ ಸಿಗುತ್ತಿಲ್ಲ ಎಂಬ ಆಕ್ಷೇಪಣೆಗಳು ಯೂಟ್ಯೂಬ್ ವಲಯದಲ್ಲಿ ಕೇಳಿಬಂದಿದ್ದವು. ಈ ಹಿನ್ನೆಲೆ ಆಂಬಿಯೆಂಟ್ ಫೀಚರ್ ಅಭಿವೃದ್ಧಿಪಡಿಸಿರುವ ಗೂಗಲ್, ಅದನ್ನು ಈಚೆಗೆ ಬಿಡುಗಡೆ ಮಾಡಿದೆ.

ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯವಿರುವ ಯೂಟ್ಯೂಬ್ ಆ್ಯಪ್‌ನಲ್ಲಿ ಆಂಬಿಯೆಂಟ್ ಫೀಚರ್ ಲಭ್ಯವಾಗಲಿದ್ದು, ಇದು ಯೂಟ್ಯೂಬ್‌ನ ವೀಕ್ಷಣಾನುಭವದ ನೋಟವನ್ನೇ ಬದಲು ಮಾಡಿದೆ. ಅಂದರೆ ಇಂಟರ್‌ಫೇಸ್‌ನ ಬ್ಯಾಕ್‌ಗ್ರೌಂಡ್ ಬಣ್ಣ ಬದಲಾಗುವ ಆಯ್ಕೆ ಇದಾಗಿದ್ದು, ನೋಡುಗರನ್ನು ವಿಡಿಯೊದಲ್ಲೇ ತಲ್ಲೀನಗೊಳಿಸುವ ಅನುಭವ ಕಲ್ಪಿಸುತ್ತದೆ. ಈ ಫೀಚರ್ ಡೆಸ್ಕ್‌ಟಾಪ್, ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಬಳಕೆದಾರರಿಗೆ ಸಪೋರ್ಟ್ ಮಾಡುತ್ತದೆ.

ಆಂಬಿಯೆಂಟ್ ಮೋಡ್ ಉಪಯೋಗಿಸಬೇಕು ಎಂದುಕೊಂಡರೆ ನಿಮ್ಮ ಸ್ಮಾರ್ಟ್‌ಫೋನ್ ಅಥವಾ ಡೆಸ್ಕ್‌ಟಾಪ್‌ನಲ್ಲಿ ಯೂಟ್ಯೂಬ್ ತೆರೆದು, ಸೆಟ್ಟಿಂಗ್ಸ್‌ನಲ್ಲಿ ಡಾರ್ಕ್ ಥೀಮ್ ಆನ್ ಮಾಡಿದರೆ ಸಾಕು. ತಕ್ಷಣವೇ ಈ ಆಂಬಿಯೆಂಟ್ ಮೋಡ್ ಆಟೊಮ್ಯಾಟಿಕ್ ಆಗಿ ಆನ್ ಆಗುತ್ತದೆ.

ಇದಕ್ಕಾಗಿ ಮೊದಲು ಯೂಟ್ಯೂಬ್ ಆ್ಯಪ್ ತೆರೆದು, ಬಲ ಮೂಲೆಯಲ್ಲಿ ಕಾಣಿಸುವ ನಿಮ್ಮ ಪ್ರೊಫೈಲ್ ಚಿತ್ರದ ಮೇಲೆ ಕ್ಲಿಕ್ ಮಾಡಬೇಕು. ‘ಅಪಿಯರೆನ್ಸ್’ (Appearances) ಆಯ್ಕೆ ಮೇಲೆ ಒತ್ತಿದರೆ ನಂತರ ಸಿಗುವ ‘ಡಾರ್ಕ್ ಥೀಮ್’ ಆಯ್ದುಕೊಳ್ಳಬೇಕು. ಬಳಿಕ ಯೂಟ್ಯೂಬ್‌ನಲ್ಲಿ ವಿಡಿಯೊ ಪ್ಲೇ ಮಾಡಿದರೆ ವಿಭಿನ್ನ ವೀಕ್ಷಣಾನುಭವ ಪಡೆಯಬಹುದು.

ಸದಾ ಆಂಬಿಯೆಂಟ್ ಮೋಡ್‌ನಲ್ಲಿಯೇ ವಿಡಿಯೊ ವೀಕ್ಷಣೆ ಮಾಡಿದರೆ ಬೇಸರ ಉಂಟಾಗುವ ಸಾಧ್ಯತೆಯಿದೆ. ಹೊಸತನದ ಅನುಭವವೂ ಸಿಗುವುದಿಲ್ಲ. ಸಿನಿಮಾಗಳಲ್ಲಿನ ವೈಭವೀಕರಣದಿಂದ ಕೂಡಿದ ವಿಡಿಯೊಗಳನ್ನು ವೀಕ್ಷಣೆ ಮಾಡುವಾಗ ಆಂಬಿಯೆಂಟ್ ಆಯ್ಕೆ ಸೂಕ್ತವಾದದ್ದು.

ಒಂದು ವೇಳೆ ಆಂಬಿಯೆಂಟ್ ಮೋಡ್ ಆಯ್ಕೆ ಬೇಡ ಎಂದರೆ ಅದನ್ನು ಆಫ್ ಮಾಡುವ ಆಯ್ಕೆ ಕೂಡ ನೀಡಲಾಗಿದೆ. ಯೂಟ್ಯೂಬ್ ತೆರೆದ ನಂತರ ಸೆಟ್ಟಿಂಗ್ ಆಯ್ಕೆಗೆ ಹೋಗಿ, ನಂತರ ಅಲ್ಲಿಯೇ ಕಾಣಿಸಿಕೊಳ್ಳುವ ‘ಆಂಬಿಯೆಂಟ್ ಮೋಡ್’ ಟ್ಯಾಪ್ ಮಾಡಿದರೆ ಈ ಆಯ್ಕೆ ಆಫ್ ಆಗುತ್ತದೆ.

### ಜಾಹೀರಾತು ಕಿರಿಕಿರಿ ತಪ್ಪಿಸಬೇಕೇ?

ಬ್ರೌಸರ್‌ನಲ್ಲಿ ಯೂಟ್ಯೂಬ್ ವಿಡಿಯೊಗಳನ್ನು ವೀಕ್ಷಿಸುವಾಗ ನಿಯಮಿತವಾಗಿ ಜಾಹೀರಾತುಗಳು ನುಸುಳಿ ಕಿರಿಕಿರಿ ಉಂಟು ಮಾಡುತ್ತವೆ. ಇಂತಹ ಕಿರಿಕಿರಿಯಿಂದ ಮುಕ್ತವಾಗಬೇಕಾದರೆ ಗುಣಮಟ್ಟದ ಜಾಹೀರಾತು ಬ್ಲಾಕರ್‌ಗಳನ್ನು ಉಪಯೋಗಿಸುವುದು ಒಳಿತು. ಅದರಿಂದ ಆ್ಯಡ್‌ಫ್ರೀ ಯೂಟ್ಯೂಬ್ ವೀಕ್ಷಣೆ ಸಿಗುತ್ತದೆ.

ಆ್ಯಡ್‌ಬ್ಲಾಕ್, ಸ್ವಾಪ್ ಆ್ಯಡ್‌ಗಳಂತಹ ಆ್ಯಡ್ ಬ್ಲಾಕರ್‌ಗಳು ಬ್ರೌಸರ್ ಎಕ್ಸ್‌ಟೆನ್ಷನ್ ಆಗಿ ದೊರೆಯುತ್ತವೆ. ಅವುಗಳನ್ನು ಇನ್‌ಸ್ಟಾಲ್ ಮಾಡಿಕೊಂಡು ಜಾಹೀರಾತು ಮುಕ್ತ ವಿಡಿಯೊಗಳನ್ನು ಯೂಟ್ಯೂಬ್‌ನಲ್ಲಿ ವೀಕ್ಷಣೆ ಮಾಡಬಹುದು. ಆ್ಯಡ್ ಬ್ಲಾಕರ್‌ಗಳು ಬೇಡವೆಂದರೆ, ಅವುಗಳಿಗೆ ಪರ್ಯಾಯವಾಗಿ ಯೂಟ್ಯೂಬ್ ವಿಡಿಯೊದ ಯುಆರ್‌ಎಲ್ ಮತ್ತು ಪದಗಳ ಮೂಲಕ ಆ್ಯಡ್‌ಲೆಸ್‌ಟ್ಯೂಬ್, ವ್ಯೂವ್‌ಪ್ಯೂರ್ ಮತ್ತು ವೊಯ್ಲಾದಂತಹ ಸರ್ಚ್ ಎಂಜಿನ್‌ಗಳಲ್ಲಿ ಜಾಹೀರಾತುಮುಕ್ತ ವಿಡಿಯೊಗಳನ್ನು ನೋಡಬಹುದು. ■

## ವಾಟ್ಸಾಪ್ ಸ್ಟೇಟಸ್‌ಗೆ ಕಡಿವಾಣ

ಬೇಕಾಬಿಟ್ಟಿ ವಾಟ್ಸಾಪ್ ಸ್ಟೇಟಸ್ ಹಾಕುವುದಕ್ಕೆ ಕಡಿವಾಣ ಹಾಕುವ ಸಲುವಾಗಿ ಮೆಟಾ ಕಂಪನಿಯು ಹೊಸ ಫೀಚರ್ ಕಲ್ಪಿಸಲಿದೆ. ವಾಟ್ಸಾಪ್ ಬಳಕೆದಾರರು ತಮ್ಮ ಕಾಂಟ್ಯಾಕ್ಟ್‌ನಲ್ಲಿರುವ ಯಾವುದೇ ವ್ಯಕ್ತಿ ಅಶ್ಲೀಲ ವಿಡಿಯೊವನ್ನು ತನ್ನ ಸ್ಟೇಟಸ್‌ನಲ್ಲಿ ಹಂಚಿಕೊಂಡರೆ, ಮತ್ತೊಬ್ಬರ ಭಾವನೆಗೆ ಧಕ್ಕೆಯನ್ನುಂಟು ಮಾಡುವಂತಹ ಸ್ಟೇಟಸ್ ಹಂಚಿಕೊಂಡರೆ ಆ ಬಗ್ಗೆ ರಿಪೋರ್ಟ್ ಮಾಡುವ ಆಯ್ಕೆಯನ್ನು ವಾಟ್ಸಾಪ್ ಕಲ್ಪಿಸಲಿದೆ. ಇದು ವಾಟ್ಸಾಪ್‌ನ ಡೆಸ್ಕ್‌ಟಾಪ್ ಆವೃತ್ತಿಗೆ ಲಭ್ಯವಾಗಲಿದೆ. ಬಳಿಕ ಅಂಥವರ ಸ್ಟೇಟಸ್‌ಗೆ ನಿರ್ಬಂಧ ಹೇರಲಾಗುತ್ತದೆ.

ಭದ್ರತಾ ವಿಚಾರದಲ್ಲಿ ಬಳಕೆದಾರರಿಗೆ ವಾಟ್ಸಾಪ್ ಇನ್ನಷ್ಟು ಹೆಚ್ಚಿನ ಭದ್ರತೆ ನೀಡಲು ಮುಂದಾಗಿದೆ. ಹೊಸ ಡಿವೈಸ್‌ಗಳಿಗೆ ಲಾಗಿನ್ ಮಾಡುವಾಗ ಹೊಸ ಪರಿಶೀಲನಾ ಕೋಡ್ ನಮೂದಿಸುವುದು ಕಡ್ಡಾಯವಾಗಲಿದೆ. ಅಲ್ಲದೇ ಒಂದಕ್ಕಿಂತ ಹೆಚ್ಚಿನ ಡಿವೈಸ್‌ಗಳಲ್ಲಿ ಒಂದೇ ಖಾತೆಯನ್ನು ಬಳಕೆ ಮಾಡುವ ಫೀಚರ್ಸ್ ಅನ್ನು ಅನಾವರಣ ಮಾಡಿದ ನಂತರ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಈ ಸೌಲಭ್ಯ ನೀಡಲಾಗುತ್ತಿದೆ. ಈ ಹೊಸ ಫೀಚರ್ ಮೂಲಕ ನೀವು ಹೊಸ ಡಿವೈಸ್‌ನಲ್ಲಿ ಲಾಗಿನ್ ಮಾಡುವಾಗ 6 ಅಂಕಿಯ ಕೋಡ್ ನಮೂದಿಸಬೇಕಾಗುತ್ತದೆ.

ವಾಟ್ಸಾಪ್ ತನ್ನ ಆ್ಯಂಡ್ರಾಯ್ಡ್ ಮತ್ತು ಐಒಎಸ್ ಬಳಕೆದಾರರಿಗೆ ಆಕ್ಸಿಡೆಂಟಲ್ ಡಿಲೀಟ್ ಫೀಚರ್ಸ್ ಅನ್ನು ಅನಾವರಣಗೊಳಿಸಿದೆ. ‘ಡಿಲೀಟ್ ಫಾರ್ ಎವರಿಒನ್’ ಮಾಡುವ ಬದಲು ನೀವು ಆಕಸ್ಮಿಕವಾಗಿ ‘ಡಿಲೀಟ್ ಫಾರ್ ಮಿ’ ಆಯ್ಕೆ ಬಳಸಿದಲ್ಲಿ ಈ ಫೀಚರ್ ಉಪಯೋಗಕ್ಕೆ ಬರಲಿದೆ. ■